ಇ) ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ಬಳಿಕ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿ, ನಿವೇಶನಗಳನ್ನು ವಿಂಗಡಿಸಿ, ನಂತರ ಈ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಯಸುವ ಕೈಗಾರಿಕೋದ್ಯಮಿಗಳಿಗೆ ಆದ್ಯತೆ ಮೇರೆಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಣ್ಣ ಕೈಗಾರಿಕೆಗಳ ಸ್ಥಾಪನೆ

566 (944) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು (ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಅನುಮತಿ ನೀಡಿದೆ, ಅವು ಯಾವುವು;

ಇ) ಅವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳು ಉತ್ಪಾದನೆ ಪ್ರಾರಂಭಿಸಿವೆ, ಹಾಗೂ ಅವುಗಳು ಉತ್ಪಾದಿಸುವ ವಸ್ತುಗಳು ಯಾವುವು?

ಶ್ರೀ ನರಸಿಂಹನಾಯಕ (ರಾಜುಗೌಡ) (ಸಣ್ಣ ಕೈಗಾರಿಕೆ ಸಚಿವರು) :

ಅ) ಸಣ್ಣ ಕೈಗಾರಿಕೆ ಸ್ಥಾಪಿಸಲು ಇಚ್ಛಿಸಲು ಉದ್ದಿಮೆದಾರರಿಗೆ ಕೈಗಾರಿಕೆಗಳನ್ನು ಪ್ರಾರಂಭಿಸಲು ಅಗತ್ಯವಾದ ಮಾರ್ಗದರ್ಶನ ಮತ್ತು ಪ್ರೇರೇಪಣೆಯನ್ನು ನೀಡಲು ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿಯೂ, ಹಾಗೂ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿಯೂ ಏರ್ಪಡಿಸಲಾಗುತ್ತಿದೆ, ಬ್ಯಾಂಕ್ ಮತ್ತು ರಾಜ್ಯ ಹಣಕಾಸು ಸಂಸ್ಥೆ ಮೂಲಕ ಸಾಲ ಸೌಲಭ್ಯ ಒದಗಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಮಾರ್ಗದರ್ಶನ ನೀಡಲಾಗುತ್ತಿದೆ. ಅಲ್ಲದೆ, ಕಳೆದ ಮೂರು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾದ ಮೂಲ ಸೌಕರ್ಯಗಳನ್ನು ಕಲ್ಪಿಸುವುದರೊಂದಿಗೆ, 2009–14ರ ಕೈಗಾರಿಕಾ ನೀತಿಯ ನುಸಾರ ವಿವಿಧ ಉತ್ತೇಜನ ಹಾಗೂ ರಿಯಾಯಿತಿಗಳು ಲಭ್ಯವಿರುತ್ತದೆ.

1. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ರೂ.5.00 ಲಕ್ಷದಿಂದ ರೂ.35.00 ಲಕ್ಷದವರೆಗೆ ಉದ್ಯೋಗ/ ಉತ್ಪಾದನೆ ಆಧಾರಿತ ಸಹಾಯಧನ.

2. ಕೈಗಾರಿಕೆಗಳು ಖರೀದಿಸುವ ನಿವೇಶನ/ಮಳಿಗೆ ಹಾಗೂ ಸಾಲದ ದಾಖಲಾತಿಗಳ ನೋಂದಣಿ ಶುಲ್ಕದಲ್ಲಿ ಶೇಕಡಾ 75 ರಿಂದ 100ರ ವರೆಗೆ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ.
3. ಸರ್ಕಾರದ ಇಲಾಖೆಗಳ ಖರೀದಿಯಲ್ಲಿ ಶೇಕಡ 15ರ ದರ ರಿಯಾಯ್ತಿ
4. ಕೃಷಿ ಭೂಮಿ ಪರಿವರ್ತನಾ ಶುಲ್ಕದಲ್ಲಿ ಶೇಕಡಾ 75 ರಿಂದ 100 ರ ವರೆಗೆ ವಿನಾಯಿತಿ
5. ಪ್ರವೇಶ ತೆರಿಗೆ ವಿನಾಯಿತಿ.
6. ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.
7. ಸೂಕ್ಷ್ಮ ಕೈಗಾರಿಕೆಗಳಿಗೆ ಶೇಕಡಾ 5 ರಷ್ಟು ಬಡ್ಡಿ ಸಹಾಯಧನ
8. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ತಾಂತ್ರಿಕ ಉನ್ನತೀಕರಣದಡಿ ಐ.ಎಸ್.ಒ/ಬಿಐಎಸ್ ಪ್ರಮಾಣ ಪತ್ರಗಳನ್ನು ಪಡೆಯಲು, ಪೇಟೆಂಟ್ ನೋಂದಣಿಗಾಗಿ ಸಹಾಯಧನ
9. ಮಳೆ ಕೊಯ್ಲು, ಜಲ ಸಂರಕ್ಷಣೆ, ಶಕ್ತಿ ಸಂರಕ್ಷಣೆ ಅನುಸರಿಸುವ ಕೈಗಾರಿಕೆಗಳಿಗೆ ಸಹಾಯಧನ.
10. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿಗಳು
11. ತ್ಯಾಜ್ಯವಸ್ತು ಸಂಸ್ಕರಣಾ ಘಟಕಗಳಿಗೆ ರೂ.100 ಲಕ್ಷದ ವರೆಗೆ ಸಹಾಯಧನ.
12. ರೂ.10,000ವರೆಗೂ ಯೋಜನಾ ವರದಿ ತಯಾರಿಸಲು ಸೂಕ್ಷ್ಮ ಕೈಗಾರಿಕೆಗಳಿಗೆ ಸಹಾಯಧನ.

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು 32,857 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಐಇಎಂ ಭಾಗ–1 ಪಡೆದಿರುತ್ತವೆ (ನೋಂದಾಯಿತವಾಗಿರುತ್ತವೆ). ಅವು ಈ ಕೆಳಕಂಡ ಉತ್ಪಾದನೆಯನ್ನು/ಚಟುವಟಿಕೆಯಲ್ಲಿ ತೊಡಗಲು ಉದ್ದೇಶಿಸಿರುತ್ತವೆ.

1) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೈಗಾರಿಕೆಗಳು
2) ಆಹಾರ ಸಂಸ್ಕರಣೆ ಮತ್ತು ತಂಪು ಪಾನೀಯ ಕೈಗಾರಿಕೆಗಳು
3) ಜವಳಿ/ ಸಿದ್ದ ಉಡುಪು ತಯಾರಿಕಾ ಘಟಕಗಳು
4) ಪೀಠೋಪಕರಣಗಳ ತಯಾರಿಕಾ ಘಟಕಗಳು
5) ಪ್ರಿಂಟಿಂಗ್ ಮತ್ತು ಲೇಖನ ಸಾಮಗ್ರಿ ತಯಾರಿಕಾ ಪ್ರೆಸ್‌ಗಳು
6) ಧರ್ಮ ಆಧಾರಿತ ಕೈಗಾರಿಕೆಗಳು
7) ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನ ತಯಾರಿಕಾ ಘಟಕಗಳು
8) ಕೆಮಿಕಲ್ಸ್ ತಯಾರಿಕಾ ಘಟಕಗಳು
9) ಗ್ಲಾಸ್ ಮತ್ತು ಸಿರಾಮಿಕ್ಸ್ ತಯಾರಿಸುವ ಕೈಗಾರಿಕೆಗಳು
10) ಮೂಲ ಲೋಹದ ಉತ್ಪನ್ನ ಘಟಕಗಳು
11) ಟೂಲ್ಸ್ ಮತ್ತು ಪ್ರಿಸಿಷನ್ ಕಾಂಪೋನೆಂಟ್ಸ್ ಉತ್ಪಾದನಾ ಘಟಕಗಳು
12) ಏರೋಸ್ಪೇಸ್ ಬಿಡಿ ಭಾಗಗಳು ತಯಾರಿಕಾ ಘಟಕಗಳು
13) ಸಿವಿಲ್ ಇಂಜಿನಿಯರಿಂಗ್ (ಕಟ್ಟಡ ನಿರ್ಮಾಣ)
14) ಜನರಲ್ ಇಂಜಿನಿಯರಿಂಗ್ ಅಂಡ್ ಫ್ಯಾಬ್ರಿಕೇಷನ್ ಘಟಕಗಳು
15) ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕಾ ಘಟಕಗಳು
16) ಸಾಫ್ಟ್‌ವೇರ್/ಹಾರ್ಡ್‌ವೇರ್ ಅಭಿವೃದ್ಧಿ ಮತ್ತು ನಿರ್ವಹಣಾ ಘಟಕಗಳು
17) ಆಟೋಮೊಬೈಲ್ ಉತ್ಪನ್ನ, ದುರಸ್ತಿ ಮತ್ತು ಸರ್ವೀಸ್ ಘಟಕಗಳು
18) ಫೆರಸ್ ಅಂಡ್ ನಾನ್ ಫೆರಸ್ ಉತ್ಪನ್ನ ತಯಾರಿಕಾ ಘಟಕಗಳು
19) ಬಣ್ಣಗಳ ತಯಾರಿಕಾ ಘಟಕಗಳು
20) ಟಯರ್ ಉತ್ಪಾದನೆ ಮತ್ತು ರಿ–ಟ್ರೇಡಿಂಗ್ ಘಟಕಗಳು
21) ಡ್ರಗ್ಸ್ ಮತ್ತು ಔಷಧಿಗಳ ತಯಾರಿಕೆ ಕಂಪೆನಿಗಳು

22) ಆಪ್ಟಿಕಲ್ ಇನ್ಸ್ಟ್ರುಮೆಂಟ್ಸ್, ವಾಚಸ್ ಮತ್ತು ಗಡಿಯಾರ ತಯಾರಿಕ ಘಟಕಗಳು
23) ಮುದ್ರಣ ಮತ್ತು ಸುದ್ದಿ ವಾಹಿನಿಗಳು
24) ಈ–ತ್ಯಾಜ್ಯ ಸಂಸ್ಕರಣಾ ಘಟಕಗಳು
25) ಲಾಜಿಸ್ಟಿಕ್ಸ್
26) ಇತರೆ ಸೇವಾ ಚಟುವಟಿಕೆ ಘಟಕಗಳು

ಇ) ಕಳೆದ ಮೂರು ವರ್ಷಗಳಲ್ಲಿ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನುಸಾರ ಒಟ್ಟು 56,650 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಉದ್ದಿಮೆದಾರರ ಜ್ಞಾಪನಾ ಭಾಗ–2ನ್ನು (ಐಇಎಂ ಭಾಗ–2) ಪಡೆದು, ಉತ್ಪಾದನೆಯನ್ನು ಪ್ರಾರಂಭಿಸಿವೆ.

ನೋಂದಾಯಿತ ಘಟಕಗಳು ಉತ್ಪಾದಿಸುವ ಪ್ರಮುಖ ಉತ್ಪನ್ನಗಳು:

1. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಉತ್ಪನ್ನಗಳು
2. ಆಹಾರ ಸಂಸ್ಕರಣೆ ಮತ್ತು ತಂಪು ಪಾನೀಯ
3. ಜವಳಿ/ ಸಿದ್ದ ಉಡುಪು ತಯಾರಿಕೆ
4. ಪೀಠೋಪಕರಣಗಳ ತಯಾರಿಕೆ
5. ಪ್ರಿಂಟಿಂಗ್ ಮತ್ತು ಲೇಖನ ಸಾಮಗ್ರಿ
6. ಚರ್ಮದ ಉತ್ಪನ್ನಗಳು
7. ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು
8. ಕೆಮಿಕಲ್ಸ್ ತಯಾರಿಕೆ
9. ಗ್ಲಾಸ್ ಮತ್ತು ಸಿರಾಮಿಕ್ಸ್ ತಯಾರಿಕೆ
10. ಮೂಲ ಲೋಹದ ಉತ್ಪನ್ನ
11. ಟೂಲ್ಸ್ ಮತ್ತು ಪ್ರಿಸಿಷನ್ ಕಾಂಪೋನೆಂಟ್ಸ್ ಉತ್ಪಾದನೆ
12. ಏರೋಸ್ಪೇಸ್ ಬಿಡಿ ಭಾಗಗಳು
13. ಸಿವಿಲ್ ಇಂಜಿನಿಯರಿಂಗ್ (ಕಟ್ಟಡ ನಿರ್ಮಾಣ)
14. ಜನರಲ್ ಇಂಜಿನಿಯರಿಂಗ್ ಅಂಡ್ ಫ್ಯಾಬ್ರಿಕೇಷನ್
15. ಎಲೆಕ್ಟಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು
16. ಸಾಫ್ಟವೇರ್/ಹಾರ್ಡ್‌ವೇರ್ ಅಭಿವೃದ್ಧಿ ಮತ್ತು ನಿರ್ವಹಣೆ
17. ಆಟೋಮೊಬೈಲ್ ಉತ್ಪನ್ನ, ದುರಸ್ತಿ ಮತ್ತು ಸರ್ವಿಸ್

18. ಫೆರಸ್ ಅಂಡ್ ನಾನ್ ಫೆರಸ್ ಉತ್ಪನ್ನಗಳು
19. ಬಣ್ಣಗಳ ತಯಾರಿಕೆ
20. ಟಯರ್ ಉತ್ಪಾದನೆ ಮತ್ತು ರಿ–ಟ್ರೇಡಿಂಗ್
21. ಡ್ರಗ್ಸ್ ಮತ್ತು ಔಷಧಿಗಳ ತಯಾರಿಕೆ
22. ಆಪ್ಟಿಕಲ್ ಇನ್ಸ್ಟ್ರುಮೆಂಟ್ಸ್ ಮತ್ತು ಗಡಿಯಾರ ತಯಾರಿಕಾ ಘಟಕಗಳು
23. ಮುದ್ರಣ ಮತ್ತು ಸುದ್ದಿ ವಾಹಿನಿಗಳ ಪ್ರಚರ
24. ಈ–ತ್ಯಾಜ್ಯ ಸಂಸ್ಕರಣಾ
25. ಲಾಜಿಸ್ಟಿಕ್ಸ್ ಸೇವೆ
26. ಇತರೆ ಸೇವಾ ಚಟುವಟಿಕೆ
27. ಇತರೆ ವ್ಯಾಪಾರ ಕ್ಷೇತ್ರದ ಚಟುವಟಿಕೆಗಳು
28. ಇತರೆ

ಅಸಂಘಟಿತ ಕಾರ್ಮಿಕರ ಅಭಿವೃದ್ಧಿ

545 (795) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ), ವಿಧಾನಸಭಾ ಸದಸ್ಯರು : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನ ಅದರಗುಂಚಿ ಗ್ರಾಮದಲ್ಲಿ ನಿರ್ಮಿಸಿರುವ ವಿಶ್ವ ಸಾಮೂಹಿಕ ಕಾರ್ಯಾಗಾರವು ಆ ಪ್ರದೇಶದ ನಿರುದ್ಯೋಗಿಗಳಿಗೆ ಸಹಾಯವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಕಾರ್ಯಾಗಾರದಲ್ಲಿಯೇ ಹಂಚಿಕೆಯಾದ ಫಲಾನುಭವಿಯು ಕುಟುಂಬ ಸಮೇತ ವಾಸಿಸುತ್ತಿರುವುದು ಅಲ್ಲಿಯ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ?

ಇ) ಹಂಚಿಕೆಯಾದ ಫಲಾನುಭವಿಯು ನಿಯಮಾವಳಿ ಉಲ್ಲಂಘಿಸಿದ್ದರೂ ಸಹ ಅದರ ಹಂಚಿಕೆಯನ್ನು ರದ್ದುಪಡಿಸಲು ನಿಯಮಾವಳಿಗಳಲ್ಲಿ ಅವಕಾಶವಿಲ್ಲವೇ?

ಈ) ಅಲ್ಲಿಯ ಅಧಿಕಾರಿಗಳಿಗೆ ನಿಯಮಾವಳಿ ಉಲ್ಲಂಘನೆಯಾದ ವಿಷಯ ಗಮನಕ್ಕೆ ಬಂದಿದ್ದರೆ ತೆಗೆದುಕೊಂಡ ಕ್ರಮಗಳೇನು?

ಉ) ಆ ರೀತಿ ಹಂಚಿಕೆಯಾದ ಆದೇಶವನ್ನು ರದ್ದುಪಡಿಸಿ, ವಿಶ್ವ ಸಾಮೂಹಿಕ ಕಾರ್ಯಾಗಾರವು ಅಲ್ಲಿಯ ನಿರುದ್ಯೋಗಿಗಳಿಗೆ ಉದ್ಯೋಗ